## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : | 45(357) |
| ಮಾನ್ಯ ಸದಸ್ಯರ ಹೆಸರು : | ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು : | ಮಾನ್ಯ ಮುಖ್ಯಮಂತ್ರಿಯವರು |
| ಉತ್ತರಿಸಬೇಕಾದ ದಿನಾಂಕ : | 29.01.2026 |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಸಿಆಸುಇ/02/ಸೇಹಿಮ/2025, ದಿನಾಂಕ:03.09.2025 ರಂದು ಒಳ ಮೀಸಲಾತಿಗೆ ಸಂಬಂಧಿಸಿದಂತೆ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿ ಆದೇಶ ಹೊರಡಿಸಿದ್ದು, ಸದರಿ ಆದೇಶದಲ್ಲಿ ರೋಸ್ಟರ್ ಬಿಂದು 2,4,6,8ನೇ ಬಿಂದುಗಳನ್ನು ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವುದು ಕಾನೂನುಬದ್ಧವಾಗಿಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಸಮಾಜ ಕಲ್ಯಾಣ ಇಲಾಖೆಯಿಂದ ಸಾಮಾನ್ಯ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಸಮೂಹದವರಿಗೆ ನಿಗದಿಪಡಿಸಲಾದ ಮೀಸಲಾತಿ ಪ್ರಮಾಣದಂತೆ, 100 ಬಿಂದುಗಳ ರೋಸ್ಟರ್‌ನ್ನು ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸೇಹಿಮ 1995 **ದಿನಾಂಕ:20.06.1995**ರಲ್ಲಿ ನಿಗದಿಪಡಿಸಲಾಗಿರುತ್ತದೆ.<br><br>ಸದರಿ ಆದೇಶದಲ್ಲಿ ಬೆಸ ಸಂಖ್ಯೆ (odd number) ಬಿಂದುಗಳಾದ 1, 3, 5, 7 ---- 99 ಗಳನ್ನು ಮೀಸಲಾತಿ ಪ್ರಮಾಣದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳಿಗೆ ಗುರುತಿಸಲಾಗಿರುತ್ತದೆ.<br><br>ಸಾಮಾನ್ಯ ವರ್ಗದವರಿಗೆ ಶೇ 50 ರಷ್ಟು ಬಿಂದುಗಳನ್ನು ಗುರುತಿಸಬೇಕಾಗಿದ್ದರಿಂದ 100 ಬಿಂದುಗಳ ರೋಸ್ಟರಿನಲ್ಲಿ ಸಮ ಸಂಖ್ಯೆ (even number) ಬಿಂದುಗಳಾದ 2, 4, 6, 8 ------ 100 ಗಳನ್ನು ಸಾಮಾನ್ಯ ವರ್ಗಕ್ಕೆ ಗುರುತಿಸಲಾಗಿರುತ್ತದೆ.<br><br>ನಂತರದಲ್ಲಿ, 2022ರ ಅಧಿನಿಯಮದನ್ವಯ ಮೀಸಲಾತಿಯನ್ನು ಅನುಸೂಚಿತ ಜಾತಿಗಳಿಗೆ 15% ರಿಂದ 17% ಕ್ಕೆ ಹಾಗೂ ಅನುಸೂಚಿತ ಪಂಗಡಗಳಿಗೆ 3% ರಿಂದ 7%ಕ್ಕೆ ಹೆಚ್ಚಿಸಲಾಗಿರುವ ಹಿನ್ನೆಲೆಯಲ್ಲಿ ಸಾಮಾನ್ಯ ಅಭ್ಯರ್ಥಿಗಳಿಗೆ ನಿಗಧಿಪಡಿಸಲಾಗಿದ್ದ 18,32, 62, 78ನೇ ಬಿಂದುಗಳನ್ನು ಪರಿಶಿಷ್ಟ ಪಂಗಡಗಳಿಗೆ ಮತ್ತು 46 ಮತ್ತು 96ನೇ ಬಿಂದುಗಳನ್ನು ಪರಿಶಿಷ್ಟ ಜಾತಿಗೆ ಹೆಚ್ಚುವರಿಯಾಗಿ ನಿಗಧಿಪಡಿಸಲಾಗಿರುತ್ತದೆ. ಇದನ್ನು ಹಾಗೂ ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿಯನ್ನು ಹೊರತುಪಡಿಸಿ ದಿನಾಂಕ 20.06.1995ರ ಆದೇಶದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. |

| | | |
|---|---|---|
| | | ಆದ್ದರಿಂದ 2,4,6,8ನೇ ರೋಸ್ಟರ್ ಬಿಂದುಗಳನ್ನು ಸಾಮಾನ್ಯ ವರ್ಗಕ್ಕೆ ನಿಗದಿಪಡಿಸಿರುವುದು ಕಾನೂನುಬದ್ಧವಾಗಿರುತ್ತದೆ. |
| (ಆ) | ಪರಿಶಿಷ್ಟ ಜಾತಿಯ ರೋಸ್ಟರ್ ಬಿಂದು 1ರ ನಂತರ 7ನ್ನು ನಿಗದಿಪಡಿಸುವ ಬದಲು 9ಕ್ಕೆ ಮುಂದೂಡಿರುವುದು 14ರ ಬದಲು 15ನೇ ಬಿಂದುವನ್ನು, 21ರ ಬದಲು 23ನೇ ಬಿಂದುವನ್ನು ನಿಗದಿಪಡಿಸಿರುವುದು, 25ನೇ ಬಿಂದುವನ್ನು ಕೈಬಿಟ್ಟಿರುವುದು, ಹೀಗೆ ಪರಿಶಿಷ್ಟ ಜಾತಿಯ ಬಿಂದುಗಳನ್ನು ಮುಂದೂಡಿ 1977ರ ಆದೇಶ ಸಂಖ್ಯೆ ಡಿಪಿಎಆರ್/01/ಎಸ್‌ಬಿಸಿ/1977. ದಿನಾಂಕ:04.03.1977ರ ಆದೇಶವನ್ನು ಉಲ್ಲಂಘಿಸಿರುವುದು ಮೀಸಲಾತಿ ಪಡೆಯುವ ಪರಿಶಿಷ್ಟ ಜಾತಿಗಳಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ; | ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್/01/ಎಸ್‌ಬಿಸಿ/1977, ದಿನಾಂಕ 04.03.1977ರ ಆದೇಶವನ್ನು, ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್/28/ಎಸ್‌ಬಿಸಿ/1986, ದಿನಾಂಕ 12.12.1986ರಲ್ಲಿ ರದ್ದುಗೊಳಿಸಲಾಗಿದ್ದು, ಸದರಿ ಆದೇಶವು ಪ್ರಸ್ತುತ ಅಸ್ತಿತ್ವದಲ್ಲಿ ಇರುವುದಿಲ್ಲ. |
| ಇ) | ದಿನಾಂಕ:03.09.2025ರ ಆದೇಶವು ನೇರ ನೇಮಕಾತಿಗಳಿಗೆ ಪರಿಷ್ಕೃತ ಮೀಸಲಾತಿ ರೋಸ್ಟರ್ ಬಿಂದುಗಳನ್ನು ನಿಗದಿಪಡಿಸುವ ಆದೇಶವಾಗಿದ್ದು, ಶಿಕ್ಷಣಕ್ಕೆ ಸಂಬಂಧಿಸಿದಂತೆ ಆದೇಶ ಮಾಡದೇ ಇರುವುದರಿಂದ ಪ್ರಸ್ತುತ ಯಾವ ಆದೇಶದ ಮೇಲೆ ಒಳ ಮೀಸಲಾತಿ ಆಧರಿಸಿ ಶಿಕ್ಷಣ ಕ್ಷೇತ್ರದಲ್ಲಿ ಪ್ರವೇಶಾತಿ ನೀಡಲಾಗುತ್ತಿದೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟಪಡಿಸುವುದು; | ಶಿಕ್ಷಣದಲ್ಲಿ ಮೀಸಲಾತಿಯನ್ನು ಅನುಷ್ಠಾನಗೊಳಿಸಲು ರೋಸ್ಟರ್ ಬಿಂದುಗಳನ್ನು ನಿಗದಿಪಡಿಸಿರುವುದಿಲ್ಲ. ಆದರೆ, ಒಟ್ಟು ಕೋರ್ಸ್‌ನ ಸೀಟುಗಳಲ್ಲಿ ಒಳ ಮೀಸಲಾತಿಯಂತೆ ಪ್ರವರ್ಗ-ಎ ಶೇ.6, ಪ್ರವರ್ಗ-ಬಿ ಶೇ.6 ಮತ್ತು ಪ್ರವರ್ಗ-ಸಿ ಗೆ ಶೇ.5 ರಷ್ಟು ಸೀಟುಗಳನ್ನು ಹಂಚಿಕೆ ಮಾಡಲಾಗುತ್ತಿದೆ. |
| ಈ) | ದಿನಾಂಕ:06.09.2025ರ ಆದೇಶ ಹಲವು ಗೊಂದಲಗಳನ್ನು ಉಂಟು ಮಾಡುತ್ತಿದ್ದು, 1 ಮತ್ತು 2 ಹುದ್ದೆಗಳಿದ್ದಾಗ ಯಾವ ಪ್ರವರ್ಗಕ್ಕೆ ಹುದ್ದೆ ನಿಗದಿಪಡಿಸಬೇಕು ಎಂಬ ಬಗ್ಗೆ ಸ್ಪಷ್ಟ ಮಾಹಿತಿ ಇಲ್ಲದೇ ಇರುವುದರಿಂದ ಎಲ್ಲಾ ಹುದ್ದೆಗಳು ನಿಗದಿಯಾಗಿರುವ ಪ್ರವರ್ಗಕ್ಕೆ ಮತ್ತೆ ಮತ್ತೆ ನಿಗದಿಯಾಗುತ್ತಿರುವುದರಿಂದ ಸದರಿ ಸಮಸ್ಯೆಯನ್ನು ನಿವಾರಿಸಲು | ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 02. ಸೇಹಿಮ 2025 ದಿನಾಂಕ 03.09.2025ರಂತೆ ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಅಳವಡಿಸಿಕೊಳ್ಳುವ ಬಗ್ಗೆ 100 ಬಿಂದುಗಳ ನೇರ ಮೀಸಲಾತಿ ರೋಸ್ಟರನ್ನು ಹೊರಡಿಸಲಾಗಿರುತ್ತದೆ.<br><br>ದಿನಾಂಕ:06.09.2025ರ ಆದೇಶದಲ್ಲಿ ದಿನಾಂಕ 08.03.2023ರ ಆದೇಶದಲ್ಲಿ ನಿಗಧಿಪಡಿಸಲಾಗಿದ್ದ ಸಮತಳ ಮೀಸಲಾತಿ ಬಿಂದುಗಳನ್ನೇ ದಿನಾಂಕ |

| | | |
|---|---|---|
| | 1 ಮತ್ತು 2 ಹುದ್ದೆಗಳಿದ್ದಾಗ ಎಸ್ಸಿ ಸಾಮಾನ್ಯವೆಂದು ನಿಗದಿಪಡಿಸುವ ಬಗ್ಗೆ ಸರ್ಕಾರ ತೆಗೆದುಕೊಂಡ ನಿರ್ಧಾರವೇನು; | 03.09.2025ರಂತೆ ಹೊರಡಿಸಿರುವ ನೇರ ಮೀಸಲಾತಿ ರೋಸ್ಟರಿಗೆ ಅಳವಡಿಸಿಕೊಳ್ಳಲು ಸೂಚಿಸಲಾಗಿದೆ.<br>ರೋಸ್ಟರ್ ಬಿಂದುಗಳ ಗುರುತಿಸುವಿಕೆ ಹಾಗೂ ಹಂಚಿಕೆಯು ವರ್ತುಲ (Cycle System) ಮಾದರಿ ವ್ಯವಸ್ಥೆಯಾಗಿರುತ್ತದೆ. ಆದ್ದರಿಂದ 1 ಮತ್ತು 2 ಹುದ್ದೆಗಳಿದ್ದಾಗಿಯೂ ಸಹ ಭವಿಷ್ಯದಲ್ಲಿ ಉದ್ಭವವಾಗುವ ರಿಕ್ತ ಸ್ಥಾನಗಳನ್ನು ಬಳಸಿಕೊಂಡು 100 ಬಿಂದುಗಳ ಸಮತಳ ಮೀಸಲಾತಿ ರೋಸ್ಟರನ್ನು ಅಳವಡಿಸಿಕೊಂಡು ಮಾಜಿ ಸೈನಿಕ, ಅಂಗವಿಕಲ, ಮಹಿಳೆ, ಯೋಜನೆಗಳಿಂದ ನಿರ್ವಸಿತರಾದವರು, ಗ್ರಾಮೀಣ ಅಭ್ಯರ್ಥಿ, ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ ಮತ್ತು ತೃತೀಯ ಲಿಂಗಿಗಳಿಗೆ ಅವಕಾಶ ಕಲ್ಪಿಸಬೇಕಾಗಿರುತ್ತದೆ. |
| ಉ) | ಪರಿಶಿಷ್ಟ ಜಾತಿಯ ಪ್ರವರ್ಗ-ಎ ರಲ್ಲಿ ಅಭ್ಯರ್ಥಿಗಳು ಇಲ್ಲದೇ ಇದ್ದಾಗ ಪ್ರವರ್ಗ-ಬಿಗೆ ಹಾಗೂ ಪ್ರವರ್ಗ-ಬಿರಲ್ಲಿ ಅಭ್ಯರ್ಥಿಗಳಿಲ್ಲದೇ ಇದ್ದಾಗ ಪ್ರವರ್ಗ-ಸಿಗೆ ಹುದ್ದೆಗಳು ವರ್ಗಾವಣೆಯಾಗುವ ಬಗ್ಗೆ ಸರ್ಕಾರ ತೆಗೆದುಕೊಂಡ ನಿರ್ಧಾರವೇನು: | ಸರ್ಕಾರದ ಪರಿಶೀಲನೆಯಲ್ಲಿದೆ. |
| ಊ) | ದಿನಾಂಕ:06.09.2025ರ ಆದೇಶದಲ್ಲಿ ಪ್ರಾರಂಭದ ಎಲ್ಲಾ ಹುದ್ದೆಗಳು ಸಾಮಾನ್ಯ ವರ್ಗದವರಿಗೆ ದೊರಕುವಂತೆ ರೋಸ್ಟರ್ ನಿಗದಿಪಡಿಸಿರುವುದನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರದ ನಿರ್ಧಾರವೇನು? | ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 3 ಸೇಹಿಮ 2025, ದಿನಾಂಕ 06.09.2025, ಆದೇಶವು ಪರಿಶಿಷ್ಟ ಜಾತಿ ಪ್ರವರ್ಗ-ಎ, ಪರಿಶಿಷ್ಟ ಜಾತಿ ಪ್ರವರ್ಗ-ಬಿ ಮತ್ತು ಪರಿಶಿಷ್ಟ ಜಾತಿ ಪ್ರವರ್ಗ-ಸಿ ಗಳಿಗೆ ಪ್ರತ್ಯೇಕವಾಗಿ ಸಮತಳ ಮೀಸಲಾತಿಯನ್ನು ಜಾರಿಗೊಳಿಸುವ ಬಗ್ಗೆಇದ್ದು, ದಿನಾಂಕ 08.03.2023ರ ಆದೇಶದಲ್ಲಿ ನಿಗಧಿಪಡಿಸಿರುವ ಸಮತಳ ಬಿಂದುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ದಿನಾಂಕ 08.03.2023ರ ಆದೇಶದಲ್ಲಿ ಮೊದಲನೇ ಸಮತಳ ಮೀಸಲಾತಿಯ ಬಿಂದು ಇತರೆ ವರ್ಗದವರಿಗಿದ್ದು, ಇದನ್ನು ಪರಿಷ್ಕರಿಸುವ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ. |

ಕಡತ ಸಂಖ್ಯೆ: ಸಿಆಸುಇ 32 ಸನೆನಿ 2026

(ಸಿದ್ದರಾಮಯ್ಯ)
ಮುಖ್ಯಮಂತ್ರಿ